**ವ್ಯಾಖಾನ**

# <u>ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ</u>

**Ref.**: Dasara Maatina Sobagu, by Dr. Vijayendra R Desai, page No. 108.

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ | ಪ |
ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು | ಅಪ |

ಕೋಟಿಕೋಟಿ ಭೃತ್ಯರಿರಲು ಹಾಟಕಾಂಬರನ ಸೇವೆ
ಸಾಟಿಯಿಲ್ಲದೆ ಮಾಡಿ ಪೂರ್ಣ ನೋಟದಿಂದ ಸುಖಿಸುತಿಹಳು | ೧ |

ಛತ್ರ ಚಾಮರ ವ್ಯಜನ ಪರಿಯಂಕ ಪಾತ್ರ ರೂಪದಲಿ ನಿಂತು
ಚಿತ್ರಚರಿತನಾದ ಹರಿಯ ನಿತ್ಯ ಸೇವೆ ಮಾಡುತಿಹಳು | ೨ |

ಸರ್ವಸ್ಥಳದಿ ವ್ಯಾಪ್ತನಾದ ಸರ್ವದೋಷ ರಹಿತನಾದ
ಸರ್ವವಂದ್ಯನಾದ ಪುರಂದರವಿಠ್ಠಲನ ಸೇವಿಸುವಳು | ೩ |

**ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ | ಪ |**
**ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು | ಅಪ |**

ಶ್ರೀ ರಮಣನ ರಮಣಿ. ವಕ್ಷೋ ನಿವಾಸಿನಿ. ನಿತ್ಯಾವಿಯೋಗಿನಿ. ಅಪ್ರಾಕೃತೆ. ಸಚ್ಚಿದಾನಂದಮಯಿ. ಇವಳು ಧನ್ಯಳು ಮಾನ್ಯಳು ಇದು ಜಗತ್ ಪ್ರಸಿದ್ಧ. ಯಾಕೆ, ಹೇಗೆ ಮಾನ್ಯಳು ಧನ್ಯಳು ಚಿಂತನೆ.-

ಸ್ವರೂಪತಃ ಶ್ರೇಷ್ಠಳು. ಅಚಿಂತ್ಯಾದ್ಭುತ ಯೋಗ್ಯತೆ. ಹರಿಯ ಅಧೀನಳು. ಹರಿಯ ತರುವಾಯ ಸರ್ವಜ್ಞಳು. ಅನಂತ ಬ್ರಹ್ಮಾಂಡ ಬಲ್ಲವಳು. ಹರಿಯ ಮನವ ಗೆದ್ದವಳು. ವೇದಾಭಿಮಾನಿನಿ.

ಶ್ರೀ ಹರಿಯ ನಂತರ -
ಸರ್ವ ಕಲ್ಯಾಣ ಗುಣ ಪೂರ್ಣೆ.  ಜ್ಞಾನ ಶಕ್ತಿ ಸಾಮರ್ಥ್ಯಗಳಲ್ಲಿ ಅದ್ವಿತೀಯಳು.  ಜೀವ ಕೋಟಿಯಲ್ಲಿ ಇವಳ ಸಮಾನರಾರಿಲ್ಲ.  ಅದಕ್ಕಾಗಿಯೂ ಇವಳ ಹೆಸರು ಸಮನಾ.
ಹರಿಯ ಅನುಗ್ರಹದಿ ಜಗದ ಸೃಷ್ಟಿ ಸ್ಥಿತಿ ಲಯ ಮಾಡಬಲ್ಲವಳು.
ಅವಳ ಸಾಮರ್ಥ್ಯ ನಮ್ಮ ಕಲ್ಪನೆ, ಊಹೆ ಎಲ್ಲಕ್ಕೂ ಮೀರಿದ್ದು.

ಇಂಥ ಮಹಾಲಕ್ಷ್ಮಿ ಸಕಲ ಸಿರಿಯೊಡತಿ, ಹರಿಯ ಸರ್ವ ಸೇವೆಯನು ತಾನೇ ಮಾಡುತ್ತಾಳೆ.
ಹರಿ ಹೇಳಿದ್ದಾನೆಂದಲ್ಲ.  ಅನಿವಾರ್ಯವೆಂದಲ್ಲ.
ಅನುರಾಗದಿಂದ.  ಆನಂದದಿಂದ.
ತುಂಬಿ ತುಳುಕುವ ಭಕ್ತಿಯಿಂದ.
ಅದಕ್ಕಾಗಿ ಅವಳು ಧನ್ಯಳು.  ಜಗದಿ ಮಾನ್ಯಳು.

**ಕೋಟಿಕೋಟಿ ಭೃತ್ಯರಿರಲು ಹಾಟಕಾಂಬರನ ಸೇವೆ**
**ಸಾಟಿಯಿಲ್ಲದೆ ಮಾಡಿ ಪೂರ್ಣ ನೋಟದಿಂದ ಸುಖಿಸುತಿಹಳು   |೧|**

ಹರಿಯ ಸೇವೆ ಕಿಂಚಿತ್ ಸಿಕ್ಕರೆ ಧನ್ಯ ಎಂದು ಸಾಲು ಸಾಲಾಗಿ ಮುಗಿಯದ ಸಾಲಿನಲ್ಲಿ ಸಾಲುಗಟ್ಟಿ ನಿಂತವರು ಕೋಟಿ ಕೋಟಿ ಭಕುತರು.
ಪರಮಾತ್ಮನನ್ನು ನೋಡಿ!  ತನ್ನ ನಲ್ಲೆ ಲಕ್ಷ್ಮೀ ಸಾನಿಧ್ಯ ಇಲ್ಲದ ಸೇವೆ ಒಲ್ಲ.  ಲಕ್ಷ್ಮೀಯೂ ಅಷ್ಟೇ.  ತಾನಿಲ್ಲದೇ ತನ್ನ ನಲ್ಲ ಯಾವ ಸೇವೆವಲ್ಲ.  ಅನುರಾಗದಿ ಮರಳು ಮಾಡಿದ್ದಾಳೆ.
ಅನುಗಾಲ ಅನುಕರಿಸಿ ಮರಳು ಮಾಡಿದ್ದಾಳೆ.
ಅನಂತ ಸೇವೆ ಸಲ್ಲಿಸುತ್ತಿದ್ದಾಳೆ.
ಯಾಕೆ ವಲ್ಲ ಲಕ್ಷ್ಮೀ ನಲ್ಲ, ಲಕ್ಷ್ಮೀ ಇಲ್ಲದ ಎಲ್ಲವನು ?

ಯಾಕೆಂದರೆ ಅವಳಂತೆ ಅವನ ಸೇವಿಸಲು ಅನ್ಯರಿಗೆ ಅಸಾಧ್ಯ.  ಸಾಟಿ ಇಲ್ಲದ ಸೇವೆ ಅವಳದು.  ನಿನ್ನೆ ಮೊನ್ನೆಯಿಂದ ನಾಳೆ ನಾಡಿದ್ದುವರೆಗೆ ಅಲ್ಲ.  ಅನಾದಿಯಿಂದ ಅನಂತದವರೆಗೆ!  ಮತ್ತೆ ಪತ್ನಿಯ ಮೇಲೆ ಎಲ್ಲಿಲ್ಲದ, ಯಾರಿಗಿಲ್ಲದ ಪ್ರೀತಿ ಅವನಿಗೆ ಅವಳ ಮೇಲೆ.

ಲಕ್ಷ್ಮೀ ಹರಿಯ ಪರಮ ಪ್ರೀತಿ ಪಾತ್ರಳು.

**ಪೂರ್ಣ ನೋಟದಿ ಸುಖಿಸುತಿಹಳು –** ಹರಿಯ ತರುವಾಯ ಅವಳು ಗುಣಪೂರ್ಣೆ.
ನೋಟವೂ ಪೂರ್ಣ.  ಸುಖವೂ ಪೂರ್ಣ.  ಸಕಲ ಗುಣಗಳೂ ಪೂರ್ಣ.
ಅನಾದಿಯಿಂದ ಜೊತಗಾರ್ತಿ.

ಆದರೂ ಹರಿ ಅವಳಿಗೆ ನಿತ್ಯ ನೂತನನೇ.

ಹರಿಯನ್ನು ನೋಡುತ್ತಾಳೆ. ಆಶ್ಚರ್ಯ ಚಕಿತಳಾಗುತ್ತಾಳೆ. ಇಲ್ಲಿಯವರೆಗೂ ಈ ರೂಪ ನೋಡಿರಲಿಲ್ಲ ಎನ್ನುತ್ತಾಳೆ.
ಇದು ಹರಿ ಮಹಿಮೆಯ ಹಿರಿಮೆ.

**ಛತ್ರ ಚಾಮರ ವ್ಯಜನ ಪರಿಯಂಕ ಪಾತ್ರ ರೂಪದಲಿ ನಿಂತು**
**ಚಿತ್ರಚರಿತನಾದ ಹರಿಯ ನಿತ್ಯ ಸೇವೆ ಮಾಡುತಿಹಳು |೨|**

ಎಂತು ಸೇವಿಪಳು?
ಬಿಟ್ಟೂಬಿಡದೇ ಎಲ್ಲ ಸಾಧನಗಳು ತಾನೇ ಆಗುತ್ತಾಳೆ.
ವೈಕುಂಠವೂ ಹೌದು. ಸುತ್ತಲೂ ಹರಿವ ನದಿ ತಾನೇ. ಅವನ ಅರಮನೆ ತಾನೇ. ಅರಮನೆಯ ಅಲಂಕಾರ ತಾನೇ.
ಅಷ್ಟೇ ಅಲ್ಲ. ಹರಿಯ ಹೊನ್ನಿನ ಪೀತಾಂಬರ, ಅಲಂಕಾರ, ಆಭರಣ, ಆಭೂಷಣ ಎಲ್ಲವೂ ಲಕ್ಷ್ಮೀ ಮಯ.
ಅಡಿಗೆಯವಳಾಗುತ್ತಾಳೆ. ಅಡಿಗೆ ಪಾತ್ರೆಗಳೂ ತಾನೇ. ಅದ್ವಿತೀಯ ಅಡಿಗೆ ಮಾಡುವವಳು, ಮಾಡಿ ಬಡಿಸುವವಳು ಅವಳೇ.
ದಿವ್ಯ ಮಂಚ, ಹಾಸು ಹೊಚ್ಚು ದಿಂಬು ಎಲ್ಲವೂ ತಾನಾಗುತ್ತಾಳೆ.
ಹರಿಗೆ ಉಣಿಸಿ ತಿನಿಸಿ ಹಾಸಿ ಹೊಚ್ಚಿ, ಹಾಡಿ ನಿದ್ರೆ ಇಲ್ಲದವನ ಮಲಗಿಸುತ್ತಾಳೆ. ಅವನ ಕಾಲು ಒತ್ತುತ್ತ ಪಾದಸೇವೆ ಮಾಡುತ್ತ ಚಿತ್ರ ವಿಚಿತ್ರ ಲೀಲೆಗಳ ಚರಿತೆಗಳ ಪೂರ್ಣ ನೋಟದಿ ನೋಡುತ್ತ ತನ್ನ ಅರಸನ ಮನದಲ್ಲಿ ಸ್ಮರಿಸುತ್ತ ಆನಂದದಿ ಪೂರ್ಣ ಸುಖಿಸುತಿಹಳು. **ಅದಕ್ಕಾಗಿ ಏನು ಧನ್ಯಳೋ ಲಕುಮಿ!.**

**ಸರ್ವಸ್ಥಳದಿ ವ್ಯಾಪ್ತನಾದ ಸರ್ವದೋಷ ರಹಿತನಾದ**
**ಸರ್ವವಂದ್ಯನಾದ ಪುರಂದರವಿಠ್ಠಲನ ಸೇವಿಸುವಳು |೩|**

ದೊರೆ ಸರ್ವತ್ರ ವ್ಯಾಪ್ತ. ಇವಳೂ ಅವನ ಜೊತೆಯೇ.

ಎಳ್ಳು ಮೊನೆಯ ಮುಳ್ಳು ಕೊನೆಯ ಬಿಡದೇ ಎಲ್ಲ ಠಾವಿನಲ್ಲಿ ಲಕ್ಷ್ಮೀ ನಲ್ಲನಿದ್ದಾನೆ, ಲಕ್ಷ್ಮೀ ಸಹಿತನಿದ್ದಾನೆ.

ಸರ್ವಸ್ಥಳದಿ ಹರಿಯ ಬಿಟ್ಟಿರುವದಿಲ್ಲ. ಶ್ರೀ ರಮಣನೂ ಅಷ್ಟೇ. ಅವಳ ಜೊತೆಯೇ. ಎಷ್ಟು? ಎಡಕೆ ಭೂ, ಬಲಕೆ ಶ್ರೀ, ಎದರು ದುರ್ಗಾ, ತೊಡೆಯ ಮೇಲೆ ಲಕುಮಿ. ಹೀಗಿದ್ದು ಸ್ವರಮಣ ರಮಿಸುವ ತನ್ನ ರಮೆಯ ಜೊತೆ ಅನುಗಾಲವೂ.
ಸರ್ವತ್ರ ಮಾತ್ರವಲ್ಲದೆ. ಸರ್ವಕಾಲದಿ ಅವನ ಸಂಗಾತಿ. ನಿತ್ಯ ಅವಿಯೋಗಿನಿ.

**ಲಯದಲ್ಲಿ -**
ಭೂದೇವಿ ಜಲವಾಗುತ್ತಾಳೆ. ಶ್ರೀದೇವಿ ಆಲದ ಎಲೆಯಾ ಗುತ್ತಾಳೆ. ಹರಿಗೆ ಹಾಸಿಗೆಯಾಗು ತ್ತಾಳೆ. ಅದ್ಭುತ ಗಾತ್ರದ ಮಗುವಾಗಿ ಪಾದದ ಹೆಬ್ಬೆರಳು ಚೀಪುತ್ತ ಮಾಧವ ಮುಗುಳ್ನಗುತ್ತ ನಿಶ್ಚಿಂತನಾಗಿ ಮಲಗಿರುವ. ಎದುರಿಗೆ ತಮವಾಗಿ ದುರ್ಗೆ ನಮಿಸಿ ಸೇವಿಸುತಿಹಳು.

**ಸೃಷ್ಟಿ ಕಾಲದಿ -**
ಹರಿಯ ಬಿಡದೆ ಅನುಸರಿಸುತ್ತಾಳೆ. ಆತ ವಾಸುದೇವ, ಈಕೆ ಮಾಯಾ. ಆತ ಸಂಕರ್ಷಣ. ಈಕೆ ಜಯಾ. ಪ್ರದ್ಯುಮ್ನ ಪತಿ. ಕೃತಿ ಸತಿ. ಅನಿರುದ್ಧ ಅವನಾದರೆ ಇವಳು ಶಾಂತಿ.
ಪರಮಾತ್ಮ ಅನಂತರೂಪ ಧರಿಸಿದರೆ ಇವಳೂ ಅನಂತ ರೂಪತಳೆದು ಅವನ ಜೊತೆಗಾರ್ತಿ.

**ಸ್ಥಿತಿ**ಯಲ್ಲೂ ಅಷ್ಟೇ. ಅವನ ಜೊತೆಗೆ ತಕ್ಕಂತೆ ಅವತಾರ ತಾಳಿ ಅವನ ಸೇವೆ ಮಾಡುತ್ತಾಳೆ.
ಅವನು ರಾಮನಾದರೆ ಇವಳು ಸೀತೆ. ಅವನು ಕೃಷ್ಣ. ಇವಳು ರುಕ್ಮಿಣಿ, ಸತ್ಯಭಾಮೆ. ಹೀಗೆಯೆ ಅನಂತನ ಜತೆ ಅನಂತ ಚರಿತಳಾಗುತ್ತಾಳೆ.

ನಿರಂತರ ಸೇವೆ ಮಾಡುತ್ತಾಳೆ. ಆತ ನಿರ್ದೋಷ. ಗುಣಪೂರ್ಣ. ಸರ್ವರಿಂದ ವಂದ್ಯ. ಇಂತವನ ಸೇವೆ ಬಿಡದೆ ಮಾಡುತ ಪೂರ್ಣ ಸುಖಿಸುತಿಹಳು.

**ಅದಕ್ಕಾಗಿ ಅವಳು ಧನ್ಯಳು ಲೋಕಮಾನ್ಯಳು.**
**ತಥ್ಯ --**
ಲಕ್ಷ್ಮೀ ವೇದಾಭಿಮಾನಿನಿ. ವೇದಗಳಲ್ಲಿ, ವೇದ ವರ್ಣಗಳಲ್ಲಿ ಅಕ್ಷರಳಾಗಿ ನಿಂತು ನಿತ್ಯ, ಶ್ರೀ ಹರಿಯ ಅನಾದ್ಯನಂತಕಾಲ ಸ್ತುತಿಸುತ್ತಾಳೆ. ಆರಾಧಿಸುತ್ತಾಳೆ.
ಪರಮಾತ್ಮನ ಅನಂತ ಗುಣಗಳ ಕೊಂಡಾ ಡುತ್ತಾಳೆ. ಇದು ಸಾಟಿಯಿಲ್ಲದ ಹಾಟಕಾಂಬರನ ಸೇವೆ.
ಆತ ವೇದವೇದ್ಯ. ವೇದಗಮ್ಯ. ವೇದಗಳಿಂದ ಮಾತ್ರ ತಿಳಿಯಲ್ಪಡುವವನು. ಬೇರೆ ಮಾನಕ್ಕೆ ಅಗಮ್ಯ.

ಲಕ್ಷ್ಮೀ ದೇವಿಯಿಂದ ಮಾತ್ರ ತಿಳಿಯಲ್ಪಡುವವನು. ಅರ್ಥ ಲಕ್ಷ್ಮೀ ದೇವಿ ತಿಳಿದಷ್ಟು ಮತ್ತಾರೂ ಅವನನ್ನು ತಿಳಿದಿಲ್ಲ. ವೇದ ಮೀರಿ ತಿಳಿದವಳು ಲಕ್ಷ್ಮೀ.

ಸರ್ವಸೇವೆ ಹೇಗೆ ಮಾಡುತ್ತಾಳೋ ಹಾಗೇ -
ವೇದದ ಸರ್ವ ವರ್ಣಗಳಲ್ಲಿದ್ದು ಹರಿಯ ಸ್ತುತಿಸಿ ಮಹಿಮೆ ಸಾರಿ ಸೇವಿಸುತ್ತಾಳೆ.
ಸರ್ವ ಕಾಲದಿ ಸೇವಿಸುತ್ತಾಳೆ. -
ಲಯದಲ್ಲೂ ಲಕ್ಷ್ಮೀ ಹರಿಯ ಜೊತೆಗಾರ್ತಿ.
ಲಕ್ಷ್ಮೀ ಯಿಂದ ಅಭಿಮನ್ಯ ವೇದ ಲಯದಲ್ಲಿ ಪರಮಾತ್ಮನಲ್ಲೇ ಬುದ್ಧಿಸ್ಥವಾಗಿರುತ್ತದೆ.
**'ಅಖಿಲೈಃ ವೇದಾ ಉದ್ಗೀರ್ಯಂತೆ ಅನಿಶಂ ಯತಃ '**

ಮತ್ತೆ ಸರ್ವ ಕಾಲದಿ ಹರಿಯ ಕಂಠದಿ ಹೊರಹೊಮ್ಮುತ್ತಿರುತ್ತದೆ.

ಮತ್ತೆ ನಿತ್ಯಾವಿಯೋಗಿನಿ.
ಯಾವಾಗಲೂ ನಾರಾಯಣನನ್ನು ಬಿಟ್ಟಿರುವವಳಲ್ಲ. ಅದಕ್ಕಾಗಿ ಲಕ್ಷ್ಮಿಯ ಪ್ರತ್ಯೇಕ ಪೂಜೆ ಸಲ್ಲ.
**'ವಿಷ್ಣುನಾಸಹಿತಾ'**
**ವಿಷ್ಣು ಸಹಿತ ಪೂಜೆ.**

ಇಂಥ ಮಹಾ ಸಾಮರ್ಥ್ಯದ ಮಹಾಲಕ್ಷ್ಮೀನಾರಾಯಣರಿಗೆ ಸಾಸಿರ ನಮನಗಳು.
ಇಂತು ವಿಠ್ಠಲನಿಗೆ ಪುರಂದರದಾಸರು ವಂದಿಸುತ್ತಾರೆ.

## ಶ್ರೀ ಕೃಷ್ಣಾರ್ಪಣಮಸ್ತು

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ